

بِسۡمِ اللّٰہِ الرَّحۡمٰنِ الرَّحِیۡم

# ಸತ್ಯವಿಶ್ವಾಸಿಯ ಗುಣಲಕ್ಷಣಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಸ್ಪೈನಿನ **'ಬಶಾರತ್'** ಮಸೀದಿಯಲ್ಲಿ **20–04–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:*

وَمَنْ أَحْسَنُ قَوْلًا مِّمَّن دَعَا إِلَى اللَّهِ وَعَمِلَ صَالِحًا وَقَالَ إِنَّنِي مِنَ الْمُسْلِمِينَ

**ವಮನ್ ಅಹ್‌ಸನು ಖೌಲನ್ ಮಿಮ್ಮನ್ ದಆ ಇಲಲ್ಲಾಹಿ ವಅಮಿಲ ಸಾಲಿಹನ್ ವಖಾಲ ಇನ್ನನೀ ಮಿನಲ್ ಮುಸ್ಲಿಮೀನ್.**

ಅಲ್ಲಾಹನೆಡೆಗೆ (ಜನರನ್ನು) ಆಹ್ವಾನಿಸುವ, ಸತ್ಕರ್ಮ ನಿರತರಾಗಿರುವ ಹಾಗೂ 'ನಾನು ಖಂಡಿತವಾಗಿಯೂ ಮುಸ್ಲಿಮರ ಪೈಕಿಯವನಾಗಿದ್ದೇನೆ' ಎಂದು ಹೇಳುವವನಿಗಿಂತ ಉತ್ತಮ ಮಾತನ್ನಾಡುವವನು ಯಾರಿದ್ದಾನೆ? (41:34).

ಒಬ್ಬ ಸತ್ಯವಿಶ್ವಾಸಿಯ ವೈಶಿಷ್ಟ್ಯವಾಗಬೇಕಾದ ಎಲ್ಲ ವಿಶೇಷತೆಗಳೂ ಈ ವಚನದಲ್ಲಿ ಅಡಕವಾಗಿವೆ. ಅಲ್ಲಾಹನು ವಿವರಿಸಿದ ಈ ಮೂರು ವಿಷಯಗಳು ಅಥವಾ ವೈಶಿಷ್ಟ್ಯಗಳು ಯಾರಲ್ಲಿಯಾದರೂ ಇದ್ದಲ್ಲಿ ಅವನ ಜೀವಿತದಲ್ಲಿ ಮತ್ತು ಸಮಾಜದಲ್ಲಿ ಕ್ರಾಂತಿ ಉಂಟಾಗಬಹುದಾಗಿದೆ. ಆ ಮೂರು ವಿಷಯಗಳು ಇವುಗಳಾಗಿವೆ: **ದಅ್‌ವತ್ ಇಲಲ್ಲಾಹ್ –** ಅಲ್ಲಾಹನ ಕಡೆಗೆ ಕರೆಯುವುದು. **ಅಮಲೆ ಸಾಲಿಹ್ –** ಸತ್ಕರ್ಮ ಮಾಡುವುದು. **ಇತಾಅತ್ –** ಅನುಸರಣೆ ಮಾಡುವುದು. ಎಂದರೆ ಅನುಸರಣೆ ಮಾಡುವುದರ ಮಾದರಿ ತೋರಿಸುವುದು ಅಥವಾ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಎಲ್ಲಾ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವನು. ಅನುಷ್ಠಾನಕ್ಕೆ ತರಲು ತನ್ನ ಶಕ್ತಿಸಾಮರ್ಥ್ಯಗಳನ್ನು ಪೂರ್ಣವಾಗಿ ಬಳಸಲು ಪ್ರಯತ್ನ ಮಾಡುವವನು.

ಈ ವಿಷಯಗಳು ಹೇಗಿವೆ ಎಂದರೆ, ಮೊದಲನೆಯ ವಿಷಯ ಓರ್ವ ಸತ್ಯವಿಶ್ವಾಸಿಯನ್ನು ಧಾರ್ಮಿಕ ವಿಷಯಗಳನ್ನು ಕಲಿಯುವವನನ್ನಾಗಿಯೂ ಅನಂತರ ಲೋಕಕ್ಕೆ ಕಲಿಸುವವನನ್ನಾಗಿಯೂ ಮಾಡುತ್ತದೆ. ಅನ್ಯರಿಗೆ ಕಲಿಸುವ ಕಡೆಗೆ ಗಮನ ಹರಿಯಲು ಸಾಧ್ಯವಾಗುವುದು ಅವರನ್ನು ಶೈತಾನನ ಹಿಡಿತದಿಂದ ರಕ್ಷಿಸಬೇಕೆಂಬ ಹೃತ್ಪೂರ್ವಕ ಬೇಗುದಿ ಮತ್ತು ಶ್ರದ್ಧೆ ತಲೆದೋರುವಾಗ ಮಾತ್ರವಾಗಿದೆ. ಅಲ್ಲಾಹನನ್ನು ಭಯಪಡುವವನು ಮತ್ತು ಅಲ್ಲಾಹನ ಸಾಮೀಪ್ಯವನ್ನು ಹುಡುಕುವವನೇ ಈ ಪ್ರಯತ್ನ ಮತ್ತು ಪರಿಶ್ರಮ ನಡೆಸಬಲ್ಲನು.

ಎರಡನೆಯ ವೈಶಿಷ್ಟ್ಯ ಸತ್ಕರ್ಮ ಮಾಡುವುದಾಗಿದೆ. ಎಂದರೆ ಅಲ್ಲಾಹನ ಹಕ್ಕುಗಳನ್ನು ಮತ್ತು ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡಲು ಲಕ್ಷ್ಯ ನೀಡಬೇಕು. ಸ್ವತಃ ಒಂದು ಮಾದರಿಯಾಗಿ ವರ್ತಿಸಿ ಅನ್ಯರಿಗೆ ಮಾರ್ಗದರ್ಶಕನಾಗಬೇಕು. ಹೀಗೆ ಮಾಡದಿದ್ದರೆ, ನಿಮ್ಮ ಧಾರ್ಮಿಕ ಜ್ಞಾನ ನಿಷ್ಪ್ರಯೋಜಕವಾಗುವುದು. ಅಲ್ಲಾಹನ ಕಡೆಗೆ ಕರೆಯುವ ನಿಮ್ಮ ಕರ್ಮವೂ ಅನುಗ್ರಹ ರಹಿತವೂ ಉತ್ತಮ ಪರಿಣಾಮ ನೀಡದವುಗಳೂ ಆಗುವುದು. ಮೂರನೆಯ ವೈಶಿಷ್ಟ್ಯವೇನೆಂದರೆ, ನೈಜ ಸತ್ಯವಿಶ್ವಾಸಿ, 'ನಾನು ಪರಿಪೂರ್ಣವಾಗಿ ಅನುಸರಣೆ ಮಾಡುವವನಾಗಿದ್ದೇನೆ' ಎಂದು ಘೋಷಿಸುತ್ತಾನೆ. ಎಂದರೆ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಪರಿಪೂರ್ಣವಾಗಿ ನಂಬುತ್ತೇನೆ. ನಾನು ನಂಬುತ್ತೇನೆ ಮಾತ್ರವಲ್ಲ ಅವುಗಳನ್ನು ನನ್ನ ಜೀವಿತದ ಭಾಗಗಳನ್ನಾಗಿ ಮಾಡುತ್ತಿದ್ದೇನೆ. ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವನಾಗಿದ್ದೇನೆ ಮತ್ತು ಮುಂದೆ ಸಹ ಹಾಗೆಯೇ ಮಾಡುವೆನು. ಆಯಾಕಾಲದ ಖಲೀಫರನ್ನು ಮತ್ತು ಜಮಾಅತಿನ ನಿಝಾಮನ್ನು ಅನುಸರಿಸುವುದು ಈ ಅನುಸರಣೆಯಲ್ಲಿ ಸೇರಿದೆ. ಅಲ್ಲಾಹನು ಈ ಕಾಲಘಟ್ಟದಲ್ಲಿ ಒಂದು ಜಮಾಅತನ್ನು ಸ್ಥಾಪಿಸಲು ಬಯಸಿ ಅದನ್ನು ಸ್ಥಾಪಿಸಿರುವನು. ಆದುದರಿಂದ ಈ ಜಮಾಅತಿನೊಂದಿಗೆ ಜೋಡಿಸಿಕೊಳ್ಳುವುದು ಆವಶ್ಯಕವಾಗಿದೆ.

ಅಹ್ಮದಿಯರಾದ ನಾವು ಅನುಸರಣೆಯ ಪರಿಪೂರ್ಣ ಮಟ್ಟದಲ್ಲಿ ನೆಲೆಗೊಳ್ಳಬೇಕಾದರೆ ಮತ್ತು ನಮ್ಮ ತಬ್ಲೀಗ್ ಜಯಶಾಲಿಯಾಗಬೇಕಾದರೆ ನಮ್ಮ ಕರ್ಮಗಳು ಅಮಲೆ ಸಾಲಿಹಾತ್ (ಸತ್ಕರ್ಮ)ಗಳಾಗಬೇಕಾದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ನಿಝಾಮೆ ಖಿಲಾಫತ್‌ಗೆ ಪೂರ್ಣವಾಗಿ ಅನುಸರಣೆ ದೋರುವವರೂ ಖಿಲಾಫತ್‌ನ ಅಧೀನದಲ್ಲಿರುವ ನಿಝಾಮೆ ಜಮಾಅತ್‌ಗೆ ಸಹಕಾರ ನೀಡುವವರೂ ಆಗಬೇಕು. ನಮ್ಮ ವೈಯ್ಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳಲ್ಲಿ ಅಲ್ಲಾಹನ ಅನುಗ್ರಹ ಲಭಿಸುವುದು ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಬ್ಬ ಹುದ್ದೇದಾರ, ಪ್ರತಿಯೊಬ್ಬ ಕಾರ್ಯಕರ್ತ, ಪ್ರತಿಯೊಬ್ಬ ಮುರಬ್ಬಿ ಜಮಾಅತಿನ ನಿಝಾಮನ್ನು ಮನವರಿಕೆ ಮಾಡುವವರೂ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡುವವನೂ ಆಗುವಾಗ ಮಾತ್ರವಾಗಿದೆ. ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಿಯೋಜಿಸಿರುವನೆಂದೂ ಯಾವ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೋಸ್ಕರ ಅವರನ್ನು ನಿಯೋಜಿಸಲಾಗಿದೆಯೋ ಆ ವಾಗ್ದಾನಗಳು ಇನ್‌ಶಾ ಅಲ್ಲಾಹ್ ಪೂರ್ಣಗೊಳ್ಳುವುವು ಎಂಬುದರಲ್ಲೂ ಯಾವುದೇ ಸಂದೇಹವಿಲ್ಲ. ಅವುಗಳಲ್ಲಿ ಕೆಲವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿ ಈಡೇರಿದುವು. ಕೆಲವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತಾವಧಿ ಕಳೆದ ನಂತರ ಈಡೇರಲಿಕ್ಕಿತ್ತು. ಅವು ಈಡೇರುತ್ತಾ ಇವೆ. ಅದರ ಮೂಲಕ ಇಸ್ಲಾಮ್ ಧರ್ಮದ ಸಂದೇಶ ಲೋಕದ ಮೂಲೆ ಮೂಲೆಗಳಿಗೆ ತಲಪುತ್ತಿವೆ. ಮೆಲ್ಲಮೆಲ್ಲಗೆ ಪರಿಶುದ್ಧ ಹೃದಯಿಗಳಾದ ಜನರು ಇಸ್ಲಾಮಿಗೆ ಪ್ರವೇಶಿಸುತ್ತಿದ್ದಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ಕತಬಲ್ಲಾಹು ಲ ಅಗ್‌ಲಿಬನ್ನ ಅನ ವರುಸುಲೀ –** ಅಲ್ಲಾಹನು ನಿರ್ಧಾರ

ಮಾಡಿರುವನು ನಾನು ಮತ್ತು ನನ್ನ ಸಂದೇಶವಾಹಕರು ಜಯಶಾಲಿಗಳಾಗುವೆವು ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಅಲ್ಲಾಹನ ಸಂದೇಶವಾಹಕನಾಗಿರುವ ಕಾರಣದಿಂದ ನಾನು ಹೇಳುತ್ತೇನೆ. ಹಝ್ರತ್ ಆದಮ್ ಅಲೈಹಿಸ್ಸಲಾಮರ ಕಾಲದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದ ತನಕ ಪವಿತ್ರ ಖುರ್‌ಆನಿನ ಈ ವಚನದಲ್ಲಿ ಹೇಳಿರುವುದು ಸತ್ಯವಾಗಿ ಈಡೇರಿದೆ. ಅದೇ ರೀತಿ ನನ್ನ ಪರವಾಗಿ ಸಹ ಸತ್ಯವಾಗಿ ಈಡೇರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಿತ್ತಿದ ಬೀಜ ಹಚ್ಚುಹಸುರಾದ ಫಸಲಾಗಿ ಲೋಕದಲ್ಲಿ ಹಬ್ಬುತ್ತಾ ಇದೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ವಿವಿಧ ಇಲ್‌ಹಾಮ್‌ಗಳೂ ಅವತೀರ್ಣಗೊಂಡಿದ್ದುವು – ಅಲ್ಲಾಹನು ಅವರಿಗೆ ನೆರವು ನೀಡುವನೆಂದು. ಒಂದು ಇಲ್‌ಹಾಮ್ ಹೀಗಿದೆ: **ಯನ್‌ಸುರುಕುಮುಲ್ಲಾಹು ಫೀ ದೀನಿಹೀ –** ಅಲ್ಲಾಹನು ತನ್ನ ಧರ್ಮಕ್ಕೆ ಸಂಬಂಧಿಸಿ ನಿನಗೆ ಸಹಾಯ ನೀಡುವನು. ಇನ್ನೊಂದು ಇಲ್‌ಹಾಮ್ ಹೀಗಿದೆ: **ಯನ್‌ಸುರುಕಲ್ಲಾಹು ಮಿನ್ ಇಂದಿಹೀ** – ಅಲ್ಲಾಹನು ಸ್ವತಃ ನಿನಗೆ ಸಹಾಯ ನೀಡುವನು. ಇನ್ನೊಂದು ಇಲ್‌ಹಾಮ್ ಹೀಗಿದೆ: **ತುಝೇ ಝಮೀನ್ ಕೆ ಕಿನಾರೋಂ ತಕ್ ಇಝ್ಝತ್ ಕೆ ಸಾಥ್ ಶುಹ್‌ರತ್ ದೂಂಗಾ –** ನಿನಗೆ ಭೂಮಿಯ ಎಲ್ಲೆಗಳ ತನಕ ಗೌರವದೊಂದಿಗೆ ಪ್ರಸಿದ್ಧಿಯನ್ನು ನೀಡುವೆನು. ಇನ್ನೊಂದು ಇಲ್‌ಹಾಮ್: **ಮೈಂ ತೇರೀ ತಬ್ಲೀಗ್ ಕೋ ಝಮೀನ್ ಕೆ ಕಿನಾರೋಂ ತಕ್ ಪಹುಂಚಾವೂಂಗಾ –** ನಾನು ನಿನ್ನ ಸಂದೇಶವನ್ನು ಭೂಮಿಯ ಎಲ್ಲೆಗಳ ತನಕ ತಲಪಿಸುವೆನು.

ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ಲೋಕದ ಅಂಚುಗಳ ತನಕ ತಲಪಲಿಕ್ಕಿತ್ತು ಎಂಬುದರಲ್ಲಿ ಸಂಶಯವಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ಪ್ರೇಮಿ ಮತ್ತು ಅವರ ಪಹಿಲ್ವಾನನಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಲೋಕದಲ್ಲಿ ಪ್ರಸಿದ್ಧಿ ಗಳಿಸಲಿಕ್ಕಿತ್ತು ಮತ್ತು ಹಾಗೆ ಪ್ರಸಿದ್ಧಿ ಗಳಿಸುತ್ತಾ ಇದ್ದಾರೆ. ಎಂ.ಟಿ.ಎ. ಮೂಲಕ ಅಲ್ಲಾಹನು ಸ್ವತಃ ಈ ಸಂದೇಶವನ್ನು ಲೋಕದೆಲ್ಲೆಡೆ ತಲಪಿಸುವುದನ್ನು ನಾವು ಕಾಣುತ್ತಿದ್ದೇವೆ. ಇವೆಲ್ಲಾ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ವಾಗ್ದಾನಗಳ ಪರಿಣಾಮಗಳಾಗಿವೆ. ನನ್ನ ಖುತ್‌ಬಗಳನ್ನು ಆಲಿಸಿ ಮತ್ತು ಎಂ.ಟಿ.ಎ.ದ ವಿವಿಧ ಕಾರ್ಯಕ್ರಮಗಳನ್ನು ಆಲಿಸಿ ಸಾತ್ವಿಕರಾದ ಜನರು ಅಹ್ಮದಿಯ್ಯತ್ತನ್ನು ಸ್ವೀಕರಿಸುವ ಭಾಗ್ಯ ಗಳಿಸುತ್ತಿದ್ದಾರೆ. ನನಗೆ ಅನೇಕ ಜನರು ಪತ್ರ ಬರೆದು ತಿಳಿಸಿದ್ದಾರೆ, ನಿಮ್ಮ ಖುತ್‌ಬಗಳು ನಮ್ಮ ಮೇಲೆ ಹೇಗೆ ಪ್ರಭಾವ ಬೀರಿದುವು ಮತ್ತು ಅಹ್ಮದಿಯ್ಯತ್ ಸ್ವೀಕರಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಿದನೆಂದು. ಇವು ಅಲ್ಲಾಹನ ಕೆಲಸಗಳಾಗಿವೆ. ಅವನ ವಾಗ್ದಾನಗಳು ಈಡೇರುತ್ತಾ ಇರುವುವು – ಇನ್‌ಶಾಅಲ್ಲಾಹ್. ಯಾವ ಕೆಲಸವನ್ನು ಅಲ್ಲಾಹನು ವಹಿಸಿಕೊಂಡಿರುವನೋ ಆ ಕೆಲಸದಲ್ಲಿ ಭಾಗವಹಿಸಿ ಅಹ್ಮದಿಯರಾದ ನಾವು ಪುಣ್ಯದಲ್ಲಿ ಪಾಲು ಪಡೆಯುವರಾಗಲು ಪ್ರತಿಯೊಬ್ಬ ಅಹ್ಮದಿ ಪ್ರಾಮುಖ್ಯತೆ ನೀಡಬೇಕಾಗಿದೆ. ನಾವು ಅಲ್ಲಾಹನ ಸಂಪ್ರೀತಿ ಗಳಿಸುವವರಾಗಬೇಕು.

ಸ್ಪೈನಿನ ಅಹ್ಮದಿಯರು ಪ್ರತಿ ತಿಂಗಳು ಒಂದೆರಡು ದಿನ ತಬ್ಲೀಗ್ ಮಾಡಬೇಕು. ಇಲ್ಲಿನ ಜನರ ಮನೋಭಾವಕ್ಕೆ ಅನುಸಾರವಾಗಿ ವಿವಿಧ ರೀತಿಗಳಲ್ಲಿ ತಬ್ಲೀಗ್ ಮಾಡಿರಿ. ಕೇಂದ್ರ ಮತ್ತು ಪ್ರಾದೇಶಿಕ ತಬ್ಲೀಗ್ ಸೆಕ್ರೆಟರಿಗಳು ಮತ್ತು ಇತರ ಹುದ್ದೆದಾರರು ಇಲ್ಲಿನ ಸ್ಥಿತಿಗೆ ಅನುಸಾರವಾಗಿ ಯೋಜನೆಗಳನ್ನು ರೂಪಿಸಲಿ. ಅದೇ ರೀತಿ ಪ್ರತಿಯೊಬ್ಬ ಅಹ್ಮದಿ, ಖುದ್ದಾಮ್, ಅನ್ಸಾರ್, ಲಜ್‌ನದ ಎಲ್ಲರೂ ತಬ್ಲೀಗ್‌ಗೋಸ್ಕರ ಸಮಯ ವಿನಿಯೋಗಿಸಬೇಕು. ಏಳೆಂಟು ನೂರು ವರ್ಷಗಳ ಹಿಂದೆ ಇಲ್ಲಿ ಖಡ್ಗ ಬಲದಿಂದ ಮುಸಲ್ಮಾನರನ್ನು ಕ್ರೈಸ್ತರನ್ನಾಗಿ ಮಾಡಲಾಗಿತ್ತು. ಆದರೆ ಈಗ ನಾವು ಸ್ನೇಹ, ಸೌಹಾರ್ದ ಮತ್ತು ಇಸ್ಲಾಮಿನ ಸುಂದರ ಉಪದೇಶಗಳ ಮೂಲಕ ಇಲ್ಲಿನವರ ಹೃದಯವನ್ನು ಗೆಲ್ಲಬೇಕಾಗಿದೆ. ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ಸ್ಪೈನಿನ ಸ್ಥಿತಿ ಹೇಗಿತ್ತೋ ಅಂತಹ ಸ್ಥಿತಿ ಈಗ ಇಲ್ಲ. ಈ ಸಂದೇಶ ತಲಪಿಸುವ ಕೆಲಸದಲ್ಲಿ ಕೊರತೆಯುಂಟಾಗಿರುವುದು ನಮ್ಮಿಂದಾಗಿದೆ. ಈ ದೇಶದ ವಿವಿಧ ನಗರಗಳಲ್ಲಿ ಮೊರಾಕ್ಕೊ ಮತ್ತು ವಿವಿಧ ಅರಬ್ ದೇಶಗಳಿಂದ ಜನರು ವಲಸೆ ಬಂದು ವಾಸಿಸುತ್ತಿದ್ದಾರೆ. ಅವರು ವಾಸಿಸುವ ಪ್ರದೇಶಗಳಲ್ಲಿ ಅರಬಿ ಭಾಷೆ ಮಾತನಾಡುವವರ ಮೂಲಕ ತಬ್ಲೀಗ್ ಮಾಡಬೇಕು. ಅರಬಿ ಸಾಹಿತ್ಯಗಳನ್ನು ಹಂಚಬೇಕು.

ಇಲ್ಲಿ ವಾಸಿಸುವ ಹುದ್ದೆದಾರರು ಮತ್ತು ಮುರಬ್ಬಿಗಳು ಬಲಿಷ್ಠವೂ ಪ್ರಯೋಜನಕರವೂ ಆಗಿರುವ ಕಾರ್ಯಕ್ರಮಗಳನ್ನು ಯೋಜಿಸಬೇಕು. ಪರಸ್ಪರ ಸಹಕಾರದ ಆವಶ್ಯಕತೆ ಇದೆ. ಸ್ವಂತ ಹಿತಾಸಕ್ತಿಗಳಿಗೆ ಬದಲಾಗಿ ಜಮಾಅತಿನ ಹಿತಕ್ಕೆ ಆದ್ಯತೆ ನೀಡಬೇಕಾದುದು ಆವಶ್ಯಕವಾಗಿದೆ. ನಾವು ಅಹ್ಮದಿಯರಾಗಿ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಬೇಕಾಗಿದೆ ಎಂದು ಮನವರಿಕೆ ಮಾಡುವುದು ಆವಶ್ಯಕವಾಗಿದೆ. ವರ್ಷಕ್ಕೊಮ್ಮೆ ಹೊಸ ಮುರಬ್ಬಿಗಳು ಒಂದು ತಿಂಗಳಿಗೋಸ್ಕರ ಬಂದು ಸಾಹಿತ್ಯ ಹಂಚುವುದರಿಂದ ನಮ್ಮ ಉದ್ದೇಶ ಈಡೇರಲಾರದು.

**ದಅ್‌ವತ್ ಇಲಲ್ಲಾಹ್** (ಅಲ್ಲಾಹನ ಕಡೆಗೆ ಕರೆಯುವ) ಕೆಲಸವನ್ನು ಅಲ್ಲಾಹನು ನೈಜ ಸತ್ಯವಿಶ್ವಾಸಿಗೆ ವಹಿಸಿಕೊಟ್ಟಿದ್ದಾನೆ ಎಂಬ ವಿಷಯವನ್ನು ಅರಿತುಕೊಳ್ಳುವುದು ಆವಶ್ಯಕವಾಗಿದೆ. ಆ ಹೊಣೆಗಾರಿಕೆಯನ್ನು ನಾವು ಸಹ ಈಡೇರಿಸಬೇಕು ಎಂಬ ಭಾವನೆ ನಮ್ಮಲ್ಲಿ ಉಂಟಾಗಬೇಕಾದುದು ಆವಶ್ಯಕವಾಗಿದೆ. ಮುರಬ್ಬಿಗಳು ತಬ್ಲೀಗ್ ಮಾಡುವ ಹೊಸಮಾರ್ಗಗಳನ್ನು ಹುಡುಕಬೇಕಾದುದು ಅವರ ಹೊಣೆಗಾರಿಕೆ ಆಗಿದೆ. ಅವರು ಅವುಗಳನ್ನು ಜಮಾಅತ್ ಸದಸ್ಯರಿಗೆ ತಿಳಿಸಬೇಕು ಮತ್ತು ಜಮಾಅತನ್ನು ತಮ್ಮ ಜೊತೆ ಸೇರಿಸಿ ಕಾರ್ಯನಿರತರಾಗಬೇಕು. ಜಮಾಅತಿನ ಅಮೀರ್‌ರಿಗೆ ಸಹ ಇದರ ಬಗ್ಗೆ ಹೊಣೆಗಾರಿಕೆಗಳಿವೆ. ಬಜೆಟ್‌ಗೆ ಸಂಬಂಧಿಸಿ ಸಮಸ್ಯೆ ಇದ್ದರೆ ಅದನ್ನು ಪರಿಹರಿಸಬೇಕು. ನನಗೆ ಅವುಗಳ ಬಗ್ಗೆ ಬರೆಯಬೇಕು. ಸೆಕ್ರೆಟರಿ ತಬ್ಲೀಗ್, ಮುರಬ್ಬಿಗಳು ಮತ್ತು ಜಮಾಅತಿನ ಸದಸ್ಯರು ಧಾರಾಳವಾಗಿ ಸಹಕರಿಸಬೇಕು. ಇಸ್ಲಾಮಿಗೆ ನಷ್ಟವಾಗಿರುವ ವೈಭವವನ್ನು ಪುನಃ ಸ್ಥಾಪಿಸಲು ಇರುವ ವಿಧಾನ ಇದೇ ಆಗಿದೆ.

ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಕಾಲಘಟ್ಟ ಎಂತಹ ಅನುಗ್ರಹಭರಿತ ಕಾಲಘಟ್ಟವಾಗಿದೆಯೆಂದರೆ, ಈ ಗೊಂದಲಮಯ ದಿನಗಳಲ್ಲಿ ಅಲ್ಲಾಹನು ತನ್ನ ಅನುಗ್ರಹದಿಂದ ಹಜ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠತೆಯನ್ನು ಪ್ರಕಟಿಸಲು ಈ ಅನುಗ್ರಹಭರಿತ ನಿರ್ಧಾರವನ್ನು ಮಾಡಿದನು. ಹೃದಯದಲ್ಲಿ ಇಸ್ಲಾಮಿನ ಬಗ್ಗೆ ಒಂದು ನೋವನ್ನು ಹೊಂದಿರುವವರೂ ಇಸ್ಲಾಮ್ ಬಗ್ಗೆ ಗೌರವ ಮತ್ತು ಮಹತ್ವವನ್ನು ಹೃದಯದಲ್ಲಿ ಹೊಂದಿರುವವರೂ ಆಗಿರುವ ಜನರೊಂದಿಗೆ ನಾನು ಕೇಳಲು ಬಯಸುತ್ತೇನೆ– ಇಸ್ಲಾಮ್ ಧರ್ಮ ಇಂತಹ ಕಾಲಘಟ್ಟವನ್ನು ಎಂದಾದರೂ ದಾಟಿ ಹೋಗಿದೆಯೇ? ಹಜ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬೈದು ಹೀನೈಸಲಾಗುತ್ತಿದೆ. ಪವಿತ್ರ ಖುರ್‌ಆನನ್ನು ಅಪಮಾನಿಸಲಾಗುತ್ತಿದೆ. ಹಜ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅಲ್ಲಾಹನಿಗೆ ಏನೂ ಗೌರವವಿಲ್ಲವೇ? ಇಷ್ಟು ನಿಂದಿಸಲ್ಪಟ್ಟರೂ ಅದನ್ನು ಪ್ರತಿರೋಧಿಸಲು ಅಲ್ಲಾಹನಿಂದ ಯಾವುದೇ ವ್ಯವಸ್ಥೆ ಆಗಲಿಲ್ಲವೇ? ಯಾರ ಕಣ್ಣುಗಳಿಗೆ ಪಟ್ಟಿ ಹಾಕಲಾಗಿವೆಯೋ ಅವರು ನೋಡಲಾರರು. ಈಗ ಈ ಜಮಾಅತ್ ಸೂರ್ಯನ ಹಾಗೆ ಪ್ರಕಾಶಮಾನವಾಗಿದೆ. ಅದರ ದೃಷ್ಟಾಂತಗಳಿಗೆ ಎಷ್ಟು ಜನರು ಸಾಕ್ಷಿಗಳಾಗಿದ್ದಾರೆಂದರೆ ಅವರನ್ನೆಲ್ಲಾ ಒಂದು ಸ್ಥಳದಲ್ಲಿ ಜಮಾಯಿಸಿದರೆ ಅವರ ಸಂಖ್ಯೆ ಎಷ್ಟಾಗುವುದೆಂದರೆ ಭೂಲೋಕದ ಯಾವ ದೊರೆಯ ಬಳಿ ಸಹ ಇಷ್ಟು ದೊಡ್ಡ ಸಂಖ್ಯೆಯ ಸೈನ್ಯ ಇರಲಾರದು.

ಅಲ್ಲಾಹನು ತೋರಿಸುತ್ತಿರುವ ಈ ವೈಭವಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ಇಲ್ಲಿನ ಪ್ರೆಸ್ ಮತ್ತು ಇತರರ ಶ್ರದ್ಧೆ ನಮ್ಮ ಕಡೆಗೆ ಸರಿದಿದೆ. ಲೋಕದ ಕೆಲವು ದೇಶಗಳಲ್ಲಿ ಇದರ ಬಗ್ಗೆ ಬಹಿರಂಗವಾಗಿ ಪ್ರಕಟಿಸಲಾಗುತ್ತಿದೆ. ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ, ನೀವು ನಿಮ್ಮ ಆಯುಸ್ಸನ್ನು ವರ್ಧಿಸಲು ಬಯಸುವುದಾದರೆ ತಬ್ಲೀಗ್ ಕೆಲಸದಲ್ಲಿ ಮಗ್ನರಾಗಿರಿ ಎಂದು ಹೇಳಿರುವರು. ಧಾರ್ಮಿಕ ಸೇವೆಯಲ್ಲಿ ನಿರತರಾದವರೊಂದಿಗೆ ಅಲ್ಲಾಹನು ಮೃದುವಾಗಿ ವರ್ತಿಸುತ್ತಾನೆ. ಅವರು ತಮ್ಮ ಸೇವೆಯನ್ನು ಪೂರ್ಣಗೊಳಿಸುವ ತನಕ. ತಮ್ಮ ಆಯುಸ್ಸನ್ನು ವರ್ಧಿಸಲು ಇಚ್ಛಿಸುವವರು ತಮ್ಮ ಜೀವಿತವನ್ನು ಧಾರ್ಮಿಕ ಕೆಲಸಕ್ಕೋಸ್ಕರ ಅರ್ಪಿಸಲಿ. ಇಂದಿನ ಕಾಲದಲ್ಲಿ ಈ ಯೋಜನೆ ಅತ್ಯಂತ ಆವಶ್ಯಕವಾಗಿದೆ. ಇಂದಿನ ಕಾಲದಲ್ಲಿ ನಿಷ್ಠಾವಂತ ಸೇವಕರ ಆವಶ್ಯಕತೆ ಇದೆ. ಹೀಗೆ ಮಾಡುವುದಿಲ್ಲವಾದರೆ ಆಯುಸ್ಸಿನ ಬಗ್ಗೆ ಏನೂ ಖಾತರಿ ನೀಡಲಾಗದು. ಅದು ಅದರಷ್ಟಕ್ಕೇ ಮುಗಿದುಬಿಡುತ್ತದೆ.

ಹಜ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ಹಜ಼್ರತ್ ಅಲಿ ರಝಿಯಲ್ಲಾಹು ಅನ್‌ಹುರವರೊಂದಿಗೆ ಹೇಳಿದರು: ಅಲ್ಲಾಹನಾಣೆ ನಿನ್ನ ಮೂಲಕ ಒಬ್ಬ ವ್ಯಕ್ತಿ ಸನ್ಮಾರ್ಗ ಗಳಿಸುವುದಾದರೆ ನಿನಗೆ ಉನ್ನತ ಮಟ್ಟದ ಕೆಂಪು ಒಂಟೆ ಸಿಗುವುದಕ್ಕಿಂತ ಉತ್ತಮವಾಗಿದೆ. ಈ ಲೌಕಿಕ ಸಂಪತ್ತು ಮತ್ತು ಸಾಮಗ್ರಿಗಳು ಅದರೆದುರಿಗೆ ಯಾವುದೇ ಸ್ಥಾನವನ್ನು ಹೊಂದಿಲ್ಲ. ನೀವು ತಬ್ಲೀಗ್ ಮಾಡಿರಿ ಯಾರಾದರೂ ಮಾರ್ಗದರ್ಶನ ಪಡೆಯಲು ಮಾರ್ಗವಾಗಿರಿ. ಅಲ್ಲಾಹನ ಪಾರಿತೋಷಕಗಳನ್ನು ಪಡೆಯಲು ನಾವು ತಬ್ಲೀಗ್ ಮಾಡುವುದು ಆವಶ್ಯಕವಾಗಿದೆ. ಲೋಕಕ್ಕೆ ಮಾರ್ಗದರ್ಶನ ನೀಡಲು ಸಮಯ ವಿನಿಯೋಗಿಸಿರಿ.

ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಸ್ಲಾಮಿಗೆ ಸೇವೆ ಸಲ್ಲಿಸುವ ಬಗ್ಗೆ ಗಮನ ಹರಿಸುತ್ತಾ ಹೇಳಿದರು: ಈಗ ಸಮಯದ ಕೊರತೆ ಇದೆ. ನಾನು ಪದೇ ಪದೇ ಉಪದೇಶಿಸುತ್ತಿದ್ದೇನೆ. ಯಾವುದೇ ಯುವಕ ಹೀಗೆ ಭರವಸೆ ಹೊಂದದಿರಲಿ– ಈಗ ನನಗೆ ಹದಿನೆಂಟು ಹತ್ತೊಂಬತ್ತು ವರ್ಷ ಪ್ರಾಯ ಇನ್ನೂ ಬಹಳ ಸಮಯವಿದೆ ಎಂದು. ಅದೇ ರೀತಿ ಆರೋಗ್ಯದಿಂದಿರುವವನು ತನ್ನ ಆರೋಗ್ಯದ ಬಗ್ಗೆ ಹೆಮ್ಮೆ ಪಡದಿರಲಿ. ಒಳ್ಳೆಯ ಸ್ಥಿತಿಯಲ್ಲಿರುವವನು ತನ್ನ ಲೌಕಿಕ ಹಿರಿಮೆ ಬಗ್ಗೆ ಭರವಸೆ ಹೊಂದದಿರಲಿ. ಇದು ಕ್ರಾಂತಿಯ ಕಾಲಘಟ್ಟವಾಗಿದೆ. ಇದು ಆಖರೀ ಝಮಾನ ಆಗಿದೆ. ಅಲ್ಲಾಹನು ಸತ್ಯವಂತ ಯಾರು ಸುಳ್ಳುಗಾರ ಯಾರು ಎಂದು ಪರೀಕ್ಷಿಸುತ್ತಾನೆ. ಇದು ಸತ್ಯ ಮತ್ತು ನಿಷ್ಠೆ ಪ್ರಕಟಿಸಬೇಕಾದ ಕಾಲವಾಗಿದೆ. ನಿಮಗೆ ಕೊನೆಯ ಅವಕಾಶ ನೀಡಲಾಗಿದೆ. ಇಂತಹ ಬೇರೆ ಸಂದರ್ಭ ಸಿಗಲಾರದು. ಈ ಅವಕಾಶವನ್ನು ಕಳೆದುಕೊಳ್ಳುವವನು ದುರದೃಷ್ಟಶಾಲಿಯಾಗಿದ್ದಾನೆ.

ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೇವಲ ಬಾಯಿಮಾತಿನ ಬೈಅತ್‌ನಿಂದ ಏನೂ ಪ್ರಯೋಜನವಿಲ್ಲ. ನಿಮ್ಮನ್ನು ಸತ್ಯವಂತನನ್ನಾಗಿ ಮಾಡಲು ಪ್ರಯತ್ನ ಮಾಡಿರಿ ಮತ್ತು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ನಾನು ನೀಡಿದ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿರಿ.

ನಾನು ಕಳೆದ ವಾರದ ಖುತ್‌ಬದಲ್ಲಿ ಹೇಳಿದ ಹಾಗೆ ಕಿಶ್ತಿನೂಹ್‌ನಲ್ಲಿ ಹಮಾರಿ ತಅ್‌ಲೀಮ್ ಎಂಬ ಭಾಗವನ್ನು ಪ್ರತಿಯೊಬ್ಬ ಅಹ್ಮದಿ ಆವಶ್ಯಕವಾಗಿ ಓದಬೇಕು. ಮಾತ್ರವಲ್ಲ ಕಿಶ್ತಿನೂಹ್ ಗ್ರಂಥವನ್ನು ಪೂರ್ಣವಾಗಿ ಓದಬೇಕು. ಸತ್ಕರ್ಮಗಳ ಬಗ್ಗೆ ಗಮನ ಹರಿಸುತ್ತಾ ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಬಾಹ್ಯ ದೃಷ್ಟಿಯಲ್ಲಿ ನೋಡುವುದಾದರೆ ಜನರು **ಲಾಇಲಾಹ ಇಲ್ಲಲ್ಲಾಹ್** ಎಂದು ನಂಬುತ್ತಾರೆ. ಹಜ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಹ ನಾಲಗೆಯಿಂದ ಅಂಗೀಕರಿಸುತ್ತಾರೆ. ಅವರು ನಮಾಝ್ ಅನುಷ್ಠಿಸುತ್ತಾರೆ, ಉಪವಾಸ ಮಾಡುತ್ತಾರೆ. ಆದರೆ ವಾಸ್ತವಿಕ ವಿಷಯವೇನೆಂದರೆ ಅವರಲ್ಲಿ ಆಧ್ಯಾತ್ಮಿಕತೆ ಇಲ್ಲವೇ ಇಲ್ಲ. ಚೆನ್ನಾಗಿ ನೆನಪಿಟ್ಟುಕೊಳ್ಳಿರಿ, ಸತ್ಯವಾದ ಹೃದಯದೊಂದಿಗೆ ಆಧ್ಯಾತ್ಮಿಕ ಭಾವನೆಯೊಂದಿಗೆ ಈ ಕರ್ಮಗಳನ್ನು ಮಾಡುವ ತನಕ ಯಾವುದೇ ಲಾಭ ಸಿಗಲಾರದು. ಯಾವ ನಮಾಝ್‌ನಲ್ಲಿ ಅಸ್ತವ್ಯಸ್ತತೆ ಇದೆಯೋ ಸ್ವಾರ್ಥ ಹಿತಾಸಕ್ತಿಗಳು ಅಡಗಿರುವವೋ ಅಂತಹ ಜನರ ನಮಾಝ್‌ಗಳು ಅಲ್ಲಾಹನಿಗೋಸ್ಕರ ಖಂಡಿತವಾಗಿಯೂ ಅಲ್ಲ.

ಸತ್ಕರ್ಮಗಳ ಬಗ್ಗೆ ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ಅಲ್ಲಾಹನು ಆತ್ಮ ಮತ್ತು ಅದರ ಆಧ್ಯಾತ್ಮಿಕ ಸ್ಥಿತಿಯನ್ನು ನೋಡುತ್ತಿರುತ್ತಾನೆ. ಅವನು ಬಾಹ್ಯ ಕರ್ಮಗಳನ್ನು ಪರಿಗಣಿಸುವುದಿಲ್ಲ. ಅವನು ಅವುಗಳ ಆಂತರಿಕ ಸ್ಥಿತಿಯನ್ನು ನೋಡುತ್ತಾನೆ. ಕರ್ಮಗಳ ತಳದಲ್ಲಿ ಸ್ವಾರ್ಥತೆ ಇದೆಯೋ ಅಥವಾ ಅಲ್ಲಾಹನ ಬಗ್ಗೆ

ಸತ್ಯವಾದ ಅನುಸರಣೆ, ನಿಷ್ಠೆ ಇದೆಯೋ ಎಂದು ನೋಡುತ್ತಾನೆ. ಅಲ್ಲಾಹನಿಗೆ ತೋರಿಕೆಯ ಕರ್ಮಗಳು ಇಷ್ಟಕರವಲ್ಲ. ಅವು ಮನುಷ್ಯನಿಗೆ ಯಾವ ಪ್ರಯೋಜನವನ್ನೂ ನೀಡುವುದಿಲ್ಲ. ಪ್ರತಿಕ್ಷಣವೂ ಅಲ್ಲಾಹನ ಬಗ್ಗೆ ಭಯ ಮತ್ತು ಅವನ ಸಂಪ್ರೀತಿಯನ್ನು ಗಳಿಸುವ ಅಭಿಮತ ಇಲ್ಲದವನಿಗೆ ಪುಣ್ಯ ಲಭಿಸಲಾರದು. ಅಂತಹ ದಅ್‌ವತೆ ಇಲಲ್ಲಾಹ್ ಸಹ ಪರಿಣಾಮಕಾರಿಯಾಗುವುದಿಲ್ಲ.

ಸತ್ಕರ್ಮಗಳನ್ನು ಹೆಚ್ಚುಹೆಚ್ಚಾಗಿ ಮಾಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯವಿಶ್ವಾಸವನ್ನು ಕಾಪಾಡಲು ಇಚ್ಛಿಸುವವನು ಸತ್ಕರ್ಮಗಳನ್ನು ವರ್ಧಿಸಬೇಕು. ಕರ್ಮಗಳ ಪ್ರಭಾವ ವಿಶ್ವಾಸದ ಮೇಲೂ ಉಂಟಾಗುತ್ತದೆ. ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಕಳ್ಳ ಕದಿಯುವಾಗ ವಿಶ್ವಾಸಿಯಾಗಿರುವುದಿಲ್ಲ ಎಂದು. ವ್ಯಭಿಚಾರಿ ವ್ಯಭಿಚಾರ ಮಾಡುವಾಗ ವಿಶ್ವಾಸಿಯಾಗಿರುವುದಿಲ್ಲ ಎಂದು. ಇದರ ಅರ್ಥವೇನೆಂದರೆ ದುಷ್ಕೃತ್ಯಗಳು ಅವನ ವಿಶ್ವಾಸವನ್ನು ನಾಶಮಾಡಿದುವು ಎಂದಾಗಿದೆ. ನಮ್ಮ ಜಮಾಅತಿನವರು ಸತ್ಕರ್ಮಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು. ತಖ್ವ, ಪರಿಶುದ್ಧ ಮತ್ತು ಸತ್ಯವಾದ ಅನುಸರಣೆಯಿಂದ ಅಲ್ಲಾಹನನ್ನು ಸಂತೋಷಗೊಳ್ಳುವಂತೆ ಮಾಡಿದರೆ ಅವನು ನಿಮಗೆ ರಿಯಾಯಿತಿ ತೋರಿಸುವನು. ವಿಪತ್ತಿನ ಕಾಲದಲ್ಲಿ ಅಲ್ಲಾಹನೊಂದಿಗೆ ನಿಷ್ಠೆಯಿಂದಲೂ ಸತ್ಯಸಂಧತೆಯಿಂದಲೂ ವರ್ತಿಸುವವನಿಂದ ಅಲ್ಲಾಹನು ಸಂತೋಷಪಡುವನು.

ಆದುದರಿಂದ ಸತ್ಕರ್ಮವು ಸತ್ಕರ್ಮವಾಗುವುದು ಅದನ್ನು ಪರಿಪೂರ್ಣವಾದ ಅನುಸರಣೆಯೊಂದಿಗೆ ಮಾಡುವಾಗ ಮಾತ್ರವಾಗಿದೆ. ಅಲ್ಲಾಹನ ಸಂಪ್ರೀತಿ ಗಳಿಸಲು ಸತ್ಕರ್ಮಗಳನ್ನು ಮಾಡಬೇಕು. ನಿಮ್ಮ ಆಶಾಭಿಲಾಷೆಗಳ ಗೋಡೆಯನ್ನು ಕೆಡವಿ ಹಾಕಿ ಪ್ರತಿಯೊಂದು ಕರ್ಮದ ಉದ್ದೇಶ ಅಲ್ಲಾಹನ ಸಂಪ್ರೀತಿ ಗಳಿಸುವುದಾಗಿರಬೇಕು. ಅದಕ್ಕೆ ಆದ್ಯತೆ ನೀಡಿ ಅಲ್ಲಾಹನ ಆಜ್ಞೆಗಳ ಪ್ರಕಾರ ಕೆಲಸ ಮಾಡಬೇಕು. ಸತ್ಯವಾದ ಅನುಸರಣೆ ಇದೇ ಆಗಿದೆ. ಅಲ್ಲದೆ ಲಾಭ ಸಿಗುವಲ್ಲಿ ಅನುಸರಣೆಯನ್ನು ಪ್ರಕಟಿಸಿ ತಮ್ಮ ಇಚ್ಛೆಯಂತೆ ಕೆಲಸವಾಗದಿದ್ದರೆ ದೂರು ನೀಡುವುದು ಅನುಸರಣೆಯಲ್ಲ. ನೆನಪಿಡಿರಿ, ಜಮಾಅತಿನ ನಿಝಾಮ್ ವಿರುದ್ಧ ಅನಾವಶ್ಯಕ ದೂರು ನೀಡುವುದು ನಿಝಾಮ್‌ನಿಂದ ನಿಮ್ಮನ್ನು ದೂರ ಸರಿಸುತ್ತದೆ. ಅನಂತರ ಧರ್ಮದಿಂದ ದೂರ ಸರಿಸುವುದು. ಖಿಲಾಫತ್‌ನಿಂದಲೂ ದೂರ ಸರಿಸುವುದು. ಅನಂತರ ಅಲ್ಲಾಹನಿಂದಲೂ ದೂರ ಸರಿಯುವಿಕೆ ಸಂಭವಿಸುತ್ತದೆ. ಕೆಲವು ಜನರ ಅಂತಿಮಗತಿಯನ್ನು ನಾವು ಹೀಗೆಯೇ ಕಂಡಿದ್ದೇವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾವು ಜಯಶಾಲಿಗಳಾಗಲು ನಮಗಿರುವ ಆಯುಧಗಳು ಇಸ್ತಿಗ್‌ಫಾರ್, ತೌಬ, ಧಾರ್ಮಿಕ ಜ್ಞಾನವನ್ನು ಪಡೆಯುವುದು, ಅಲ್ಲಾಹನ ಮಹೋನ್ನತ ಸ್ಥಾನವನ್ನು ಗಮನದಲ್ಲಿರಿಸುವುದು, ಐದು ಹೊತ್ತಿನ ನಮಾಝ್ ಅನುಷ್ಠಿಸುವುದು ಆಗಿವೆ. ನಮಾಝ್, ಪ್ರಾರ್ಥನೆಗಳು ಅಂಗೀಕಾರ ಪಡೆಯುವಂತೆ ಮಾಡುವ ಕೀಲಿಗೈಗಳಾಗಿವೆ. ನಮಾಝ್‌ನಲ್ಲಿ ದುಆ ಮಾಡಿರಿ. ನಿರ್ಲಕ್ಷ್ಯತೆ ಹೊಂದಬೇಡಿರಿ. ಪ್ರತಿಯೊಂದು ಕೆಡುಕಿನಿಂದ, ಅದು ಹುಖೂಖುಲ್ಲಾಹ್‌ಗೆ ಸಂಬಂಧಿಸಿದ್ದರೂ ಹುಖೂಖುಲ್ ಇಬಾದ್‌ಗೆ ಸಂಬಂಧಿಸಿದ್ದರೂ ಅದರಿಂದ ರಕ್ಷಿಸಿಕೊಳ್ಳಿರಿ.

ಅಲ್ಲಾಹನು ನಮ್ಮನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶದ ಪ್ರಚಾರ ಮಾಡುವವರನ್ನಾಗಿಯೂ ವಿಜಯದ ಸಹಭಾಗಿಗಳನ್ನಾಗಿಯೂ ಮಾಡಲಿ. ತೌಬ, ಇಸ್ತಿಗ್‌ಫಾರ್ ಮಾಡುತ್ತಾ ದುಆ ಮಾಡುತ್ತಾ ತಬ್ಲೀಗ್ ಕೆಲಸ ನಿರ್ವಹಿಸುವವರನ್ನಾಗಿ ಮಾಡಲಿ. ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಈಡೇರಿಸುವವರನ್ನಾಗಿ ನಮ್ಮನ್ನು ಮಾಡಲಿ. ಈ ಹಕ್ಕುಗಳ ಈಡೇರಿಸುವಿಕೆ ನಮ್ಮನ್ನು ಸತ್ಕರ್ಮ ಮಾಡುವಂತೆ ಗಮನ ಹರಿಸುವವುಗಳಾಗುವುವು. ಪ್ರತಿಯೊಂದು ಕೆಲಸ ಮಾಡುವಾಗ ಅಲ್ಲಾಹನ ಸಂಪ್ರೀತಿಗಳಿಸುವುದು ನಮ್ಮ ಉದ್ದೇಶಲಕ್ಷ್ಯವಾಗಲಿ. ಅಲ್ಲಾಹನನ್ನು ಪರಿಪೂರ್ಣವಾಗಿ ಅನುಸರಿಸುವವರೊಂದಿಗೆ ನಾವು ಸೇರುವವರಾಗಲಿ. ನಾವು ಈ ವಿಷಯಗಳ ಕಡೆಗೆ ಲಕ್ಷ್ಯ ನೀಡುವವರಾದರೆ, ಇನ್‌ಶಾಅಲ್ಲಾಹ್ ಅಲ್ಲಾಹನ ವಾಗ್ದಾನಗಳ ಪ್ರಕಾರ ಇಸ್ಲಾಮಿನ ವಿಜಯದ ದಿನಗಳನ್ನು ನೋಡುವವರಾಗುವೆವು. ಅಲ್ಲಾಹನು ನಮಗೆ ಆ ಭಾಗ್ಯ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Basharat, Spain. On 20-04-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon